ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 199] ಸೋಮವಾರ 12—7—48 [ಬಿಡಿ ಪ್ರತಿ 3 ಪೈ

ೀರಾಡಿ

ಾಗ ಹೋರಾಡುತ್ತೀವೆ.

(ಡಾ|| ಖಾರ್ ಸಾಹೇಬ)

ಪ್ರಜೆಗಳಿಗಾಗಿ ಹೋರಾಡು

ಗೆ ಪಾಕಿಸ್ಥಾನದಲ್ಲಿ ಸ್ಥಾನವಿಲ್ಲ

o o

ಸಸ್ಥಾನಾಧೀಶ್ವರರಿಗೆ ಉದ್ಯೋಗ

(ಒಂದು ಶಿರ್ಷಿಕೆ)

ಮೋಟ್ಸೈಕಲ್ ಬೀರೊಗಳಲ್ಲಿ

ೂ ಜೂಜಿನ ಕುದುರೆಗಳ ಶಾಲೆಗ

ಲ್ಲಿಯೂ ಆದಲ್ಲಿ ಚನ್ನಾಗಿರುತ್ತದೆ.

o o

ಇನ್ಸೈಲ್ ರದ್ದು ಆಗುವವರೆಗೂ

ಯುದ್ಧವು ನಿಲ್ಲುವುದಿಲ್ಲ.

[ಅಬ್ದುಲ್ಲಾ ದೊರೆ]

ಹಾಗಾದಲ್ಲಿ ಯುದ್ಧ ವಿರಮಣೆ ಏಕೆ

ಇಷ್ಟರೊಳಗೇ ?

o o

ಸ್ವಂತ ಬಂಡವಾಳ ವಿಧಾನವು 10 ವರ್ಷಗಳ ನಂತರ ನಿಲ್ಲಿಸಲ್ಪಡುವುದೆಂದು ಭಾರತ ಸರ್ಕಾರವು ಹೇಳಿರುವದರಿಂದ ಪಾರಿಶ್ರಾವಿಕರಿಗೆ ಉತ್ಸಾಹವು ನಾಶವಾಗಿದೆ.

[ಎ. ಡಿ. ಕ್ಲಾಫ್]

ಸ್ವಂತ ಬಂಡವಾಳ ವಿಧಾನವು 10 ವರ್ಷಗಳವರೆಗೂ ರದ್ದು ಆಗುವುದಿಲ್ಲವೆಂದು ಭಾರತ ಸರ್ಕಾರವು ತಿಳಿಸಿರುವುದರಿಂದ ಕರ್ಮಿಕರ ಉತ್ಸಾಹವು ಗ್ಗಿದೆ.

ಮೈಸೂರು ಸಿಟಿ ರೇಷನಿಂಗ್

ಆಫೀಸರವರ ಕಛೇರಿ ತಾ|| 29-6-1948

ಪ್ರ ಕ ಟ ಣೆ

ಈ ಇಲಾಖಾ ಗೋಡೌನ್‌ಗಳಲ್ಲಿರ ತಕ್ಕ ಸುಮಾರು ಒಟ್ಟು 40,000 ತಿಥಿಲವಾದ ಮತ್ತು ಅನುಪಯುಕ್ತವಾದ ಖಾಲೀ ಗೋಣೀಚೀಲಗಳನ್ನು ಈ ಕೆಳಗೆ ನಮೂದಿಸಿರುವ ಗೋಡೌನ್‌ಗಳಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವುದು. ಈ ಬಗ್ಗೆ ಹೆಚ್ಚಿಗೆ ವಿವರಗಳನ್ನು, ಕೆಲಸದ ದಿನಗಳಲ್ಲಿ ಆಫೀಸಿನಲ್ಲಿ ತಿಳಿಯಬಹುದು.

1) ತಾ|| 19-7-48 ಬೆಳಿಗ್ಗೆ 9 ಂಟೆಗೆ ಲಷ್ಕರ್ ಸಬ್ ಗೋಡೌನ್.

2) ತಾ|| 19-7-48 ಮಧ್ಯಾಹ್ನ 3 ಗೆ ಮುಂಡಿ ಸಬ್ ಗೋಡೌನ್.

ತಾ|| 20-7-48 ಬೆಳಿಗ್ಗೆ 9 ಾಮರಾಜ ಸಬ್ ಗೋಡೌನ್.

ಾ|| 20-7-48 ಮಧ್ಯಾಹ್ನ 3 ಪಿ. ಸಿ. ಹಾಲ್

ಭುವಾಸುಲು ನಾಯುಡು

ಸರು ಮೈಸೂರು ಸಿಟಿ.

ಎ. ಎಂ. ಸಿ. ಸಿ. ರದ್ದಾಗಬೇಕು ?

ಬೆಂಗಳೂರಿನಲ್ಲಿ ಟೆಲಿಫೋನು ಕಾರ್ಖಾನೆಯನ್ನು ಎರಡೂವರೆ ಕೋಟಿ ರೂಪಾಯಿ ಖರ್ಚಿನಿಂದ ಸ್ಥಾಪಿಸಲು ಕೇಂದ್ರ ಸರಕಾರ ನಿರ್ಧರಿಸಿದೆ.

ಪಾಕಿಸ್ಥಾನದಿಂದ ಹೈದರಾಬಾದಿಗೆ ಔಷಧ ಸಾಮಾಗ್ರಿ ಸಾಗಿಸಲು ವಿಮಾನಗಳಿಗೆ ಅಪ್ಪಣೆ ಕೊಡಬೇಕೆಂದು ಭಾರತ ಸರಕಾರವನ್ನು ಪ್ರಾರ್ಥಿಸಲಾಗಿದೆ.

ಕಾಶ್ಮೀರದ ಜಿಹಾದ್‌ನಲ್ಲಿ ಸೇರಿದ್ದುಕ್ಕಾಗಿ ವಜೀರಸ್ಥಾನದ ಮೇಲೆ ಪಾಕಿಸ್ಥಾನ ಬಾಂಬು ಮಳೆ ಸುರಿಸಿತು.

ಮೈಸೂರು ರಾಜಧಾನಿಗೆ ದಯಮಾಡಿಸಿರುವ ಶ್ರೀ ಆಚಾರ್ಯ ಕೃಪಾಲಿನಿ ದಂಪತಿಗಳು ಈ ದಿನ ಟೌನ್ ಹಾಲಿನಲ್ಲಿ ಭಾಷಣ ಮಾಡುವರು.

ಹುಬ್ಬಳ್ಳಿ—ಮುಸ್ಲಿಂ ವೇಷ ಧರಿಸಿ ಬಿದರೆ ಜಿಲ್ಲೆ ಪ್ರವಾಸ ನಡೆಸಿದ ರಾಯಚೂರು ವೀರಶೈವ ಮಠದ ಸ್ವಾಮಿಗಳು ಆ ಜಿಲ್ಲೆ ರಜಕಾರು ಹಾವಳಿಯಿಂದ ಪಾಳುಬಿದ್ದಿದೆ ಎಂದೂ, ಬಹು ಮಂದಿ ಸ್ತ್ರೀಯರು ಅಪಹೃತರಾಗಿರುವರೆಂದೂ ಕೋಟ್ಯಾಂತರ ರೂಪಾಯಿ ಆಸ್ತಿಪಾಸ್ತಿ ನಷ್ಟವಾಗಿದೆಯೆಂದೂ ಹೇಳಿರುವರು.

ಹಿಂದೂಗಳೊಂದಿಗೆ ಸ್ನೇಹದಿಂದಿರಿರೆಂದು ಪಾಟಿಯೊಲಾ ಮಹಾರಾಜರು ಸಿಕ್ಖರಿಗೆ ಕೊಟ್ಟ ಹಿತಬೋಧೆ.

ಮೈಸೂರು ಸಂಸ್ಥಾನದಲ್ಲಿ ಸೀಮೆ ಎಣ್ಣೆ ಹಂಚಿಕೆ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಲಾಗುವುದಾಗಿ ಸರಕಾರ ಪ್ರೆಸ್ ನೋಟು ತಿಳಿಸುತ್ತದೆ

ಮೈಸೂರು—ಇಲ್ಲಿಗೆ ದಯಮಾಡಿಸಿರುವ ಧರ್ಮ ಪ್ರಾರಾಯಣ ಸೌ|| ಗಯಾಬಾಯ್‌ರವರ ಭಕ್ತ ಮಂಡಲಿ ಭಜನೆ ಅರಮನೆಯಲ್ಲಿ ನಡೆದು ರಾಜಪರ್ಗದವರು ಅವರನ್ನು ಸತ್ಕರಿಸಿ ಕಾಣಿಕೆ ಅರ್ಪಿಸಿದರು.

ಮೈಸೂರು ನಗರದ ಸಂಗೀತ ವಿದ್ವಾಂಸರಾದ ಶ್ರೀ ಮೈಸೂರು ಸಹೋದರರಿಂದ ನಡೆಸಲ್ಪಡುತ್ತಿರುವ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದಿಂದ ಮೈಸೂರು ಸರ್ಕಾರಿ ಸಂಗೀತ ಪರೀಕ್ಷೆಗಳಿಗೂ ಮಿಡ್ಲ್ ಸ್ಕೂಲ್ ಪರೀಕ್ಷೆಗಳಿಗೂ (ಸಂಗೀತ ಐಚ್ಛಿಕ) ಕಲಿತುಕೊಂಡ ವಿದ್ಯಾರ್ಥಿಗಳೆಲ್ಲರೂ ತೇರ್ಗಡೆ ಹೊಂದಿ ಮೇಲ್ಕಂಡ ಮಂದಿರವು ಶೇಕಡಾ ನೂರರಂತೆ ಶುಭ ಫಲಿತಾಂಶವನ್ನು ಗಳಿಸಿದೆಯೆಂದು ತಿಳಿಸಲು ಸಂತೋಷವಾಗುತ್ತದೆ.

Bangalore Races

EXTRA MEETING 1948

ಬೆಂಗಳೂರು ರೇಸೆಸ್ — ಎಕ್ಸ್‌ಟ್ರಾ ಮೀಟಿಂಗ್ — 1948

ಜುಲೈ 14, 17, 21, 24, 29 ರಲ್ಲಿ

ಒಂದನೇ ಟೋಟ್ ರೂ 10. ಎರಡನೇ ಟೋಟ್ ರೂ. 5

ರೂ. 2/- ಸ್ವೀಪ್ ಮತ್ತು ರೂ. 5/- ಟ್ರಬಲ್ ಈವೆಂಟ್

ಒಂದನೇ ತರಗತಿ – ಪುರುಷರು – ಸೀಸನ್ ಟಿಕೆಟ್ ರೂ. 30 ; ದಿನಕ್ಕೆ ರೂ. 6

,, ,, ಸ್ತ್ರೀಯರು ,, ರೂ. 15 ; ,, ರೂ. 4

ಎರಡನೇ ,, ಪುರುಷರು ಅಥವಾ ಸ್ತ್ರೀಯರು ರೂ. 2

(ಶುಭ)

ಚಿತ್ರದುರ್ಗ, ಜು 10:

ಮೈಸೂರು ಕಾಂಗ್ರೆಸ್ ಸಮಿ

ಕೂಡಲೇ ರದ್ದುಗೊಳಿಸಬೇಕು

ಕಾಂಗ್ರೆಸ್ ಸಮಿತಿಯನ್ನು ಅ

ರತ ಕಾಂಗ್ರೆಸ್ ಸಮಿತಿ ಸಂ

ಮಾಡಬೇಕು. ಎರಡು ಸಂ

ಗ ಇರುವುದು ಅನಗತ್ಯ

— ಎಂಬ ನಿರ್ಣಯ ಚಿತ್ರ

ಜಿಲ್ಲಾ ಕಾಂಗ್ರೆಸ್ ಸಮ್ಮೇಳನದಲ್ಲಿ ಗೀಕೃತವಾಯಿತು.

ಸಮ್ಮೇಳನದಲ್ಲಿ ಮೈಸೂರು ಪ್ರತಿನಿಧಿಗಳು ಇತ್ತ ವಚನಗಳನ್ನು ಪಾಲಿಸಲ್ಲ ಎಂಬ ಟೀಕೆಗಳು ಎದ್ದವು.

ಮೈಸೂರು ಸಂಸ್ಥಾನದಲ್ಲಿ ಸೀಮೆ ಎಣ್ಣೆ ಸರಬರಾಜಿನ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಪ್ರಭುತ್ವ ಕಟಣಾಧಿಕಾರಿಗಳ ಪ್ರಕಟಣೆ ತಿಳಿಸುತ್ತದೆ.

ಅಸಾಯಕಾರಕ ಆಯುಧ ಹೊಂದಿ 4 ಮಂದಿ ಹೈದರಾಬಾದ್ ಹರಿಜನರು ಜವಾಹರಾದಲ್ಲಿ ದಸ್ತಗಿರಿಯಾಗಿದ್ದಾರೆ.

ಸಂಯುಕ್ತ ಅಮೆರಿಕದಲ್ಲಿ 3೫ ಮಂದಿಯೂ 10 ನೋಟುಗಳನ್ನು ಉಪಯೋಗಿಸುತ್ತಿರುವ ಒಟ್ಟು ಮೋಟಾರುಗಳ ಸಂಖ್ಯೆ ಲಕ್ಷ. ಆದರೆ ಸ್ವಪಂ ಗಳವರಿಗೆ ಪ್ರತಿ 130 ಮೋಟಾರಿನಂತೆ ಇದೆ. ಇತರ ಪ್ರದೇಶಗಳಲ್ಲಿಯು ಒಟ್ಟು ಮೋಟಾರು ವಾಹನಗಳ ಸಂಖ್ಯೆ 154 ಮಾತ್ರವೇ.

Woodlands

From 9—7—1948

New Adventures of

TARZAN

ನ್ಯೂ ಅಡ್ವೆಂಚರ್ಸ್ ಆಫ್ ಟಾರ್ಜ್

Featuring Herman Brix

A Picture full of Thrills & excitement

Daily 3 Shows

At Opera

ಯಶಸ್ವಿ 7 ನೇ ವಾರ

ಯು. ಆರ್. ಜೀವರತ್ನ, ಎಸ್ ಎ.

ಕುಮಾರೇಷ್, ಪುಳಿಮೂಟ್ಟೆ

ಸಂತಾನಲಕ್ಷ್ಮಿ ಪಾತ್ರವಹಿಸಿರುವ

ಅ ಭಿ ಮ ನ್ಯು

12-7-48 ॥ಶ್ರೀ॥ ನಂ. 96

"ಪ್ರ ಬೋ ಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ

ಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಂಘದ ಕಾರ್ಯದರ್ಶಿ, ದೂರ್ವಾಸಪುರಂ, ಶಿವಮೊಗ್ಗಾ ಜಿಲ್ಲಾ

— ಯಜ್ಞಗಳಿಂದ —
ಕಲಿಯುಗದಲ್ಲಿ ಕೃತಯುಗ

(ಮುಂದುವರಿದುದು)

ಪೂರಾಂ—ಸಹಸ್ರಾರು ವರ್ಷಗ
ಯಜ್ಞ ನಡೆಯುವುದು ಸಾಮಾನ್ಯ
ನಿಂತುಹೋಗಿದೆ. ಹಾಗೂ ಇದರ
ಾಮವಾಗಿಯೇ ಭಾರತವು 700
ಗಳ ತನಕ ಮುಸಲ್ಮಾನರಿಂದಲೂ
ನರ್ಷಗಳಿಂದ ಇಂಗ್ಲೀಷರಿಂದಲೂ
ತಂತ್ರ್ಯದ ಸಂಕೋಲೆಗಳಲ್ಲಿ ಬಿಗಿ
ಟ್ಟಿದೆ. ಮತ್ತು ಸುತ್ತಲೂ ಹಾಹಾ
ವು ಎದ್ದು ಹೋಗಿದೆ. ಭಾರತವು
ೈತ್ರತೆಯ ಬೇಡಿಗಳಿಂದ ಕಟ್ಟಲ್ಪ
ಕಂಡು ದೊಡ್ಡದೊಡ್ಡ
ಅವರ ದುಃಖನನ್ನು
ೀಸುಗ ಮುಂದೆ
ದರೆ ಅವರು ಎಸಗಿದ ಚಿಕಿ
ದ ಕಷ್ಟವು ಹೆಚ್ಚುತ್ತಲೇ ಹೋ
ು. ಮಾತ್ರವಲ್ಲ, ಈವರೆಗೆ ನಾವು
ನದಿಂದ ಪರತಂತ್ರರಾಗಿದ್ದೆವು, ಈಗ
ನಸಿಕ ಗುಲಾಮಿಯಲ್ಲಿಯೂ ಕಟ್ಟ
ಟ್ಟಿವು! ಭಗವಾ ಶ್ರೀ ಶ್ಯಾಮ
ಸುಂದರನ ಕೃಪೆಯಿಂದ ನಮ್ಮೆದುರಿಗೆ
ವೀತರಾಗರಾದ ಮಹಾತ್ಮರಿ ಬ್ಬರಪ್ರಾದು
ರ್ಭಾವವಾಗಿದೆ. ಅವರು ಭಾರತದ
ನಾಡಿಯನ್ನು ಸರಿಯಾಗಿ ಕಂಡು ಹಿಡಿ
ದಿರುವರು. ಅನಾದಿ ಕಾಲದಿಂದ ಋಷಿ
ಗಳೂ ಮಹರ್ಷಿಗಳೂ ನಿರ್ಮಿಸಿದ ಮಾ
ರ್ಗವನ್ನು ಅಂಗೀಕರಿಸುವುದರಲ್ಲಿಯೇ
ಕಲ್ಯಾಣವನ್ನು ಕಂಡು ಅವರು ಆದನ್ನೇ
ಮಾಡಲ್ಲು ಪ್ರಾರಂಭಿಸಿರುವರು- ಭಾರ
ತದ ಎರಡು ಮಹಾ ವಿಭೂತಿಗಳೆಂದರೆ
ವೀತರಾಗ ಬ್ರಹ್ಮನಿಷ್ಠ ಶ್ರೀ ಕರಪಾ
ತ್ರೀ ಸ್ವಾಮಿಗಳು ಮತ್ತು ವೀತರಾಗ
ಮಹಾತ್ಮಾ ಶ್ರೀ ಕೃಷ್ಣಭೋಧಾಶ್ರಮ
ಸ್ವಾಮಿಗಳು. ಇವರ ಪ್ರಯತ್ನದಿಂದಲೆ
ಈ ಘೋರ ಕಲಿಕಾಲದಲ್ಲಿ ಭಾರತದ
ಪ್ರದೇಶಗೊಂದುಗಳಲ್ಲಿ ಯಜ್ಞಗಳ, ಕಥಾ
ಕೀರ್ತನ ಸದುಪದೇಶಗಳ ಸಂಭ್ರಮ
ವೆದ್ದುಬಿಟ್ಟಿದೆ ಹಾಗೂ ಕಲಿಯುಗದ
ಲ್ಲೊಂದು ಕೃತಯುಗದ ಅದ್ಭುತ
ದೃಶ್ಯವು ಉಪಸ್ಥಿತವಾಗುತ್ತಿದೆ, ದಿಲ್ಲಿ,
ಕಾನ್ಪುರ, ಬನಾರಸುಗಳ ಶತಕುಂಡೀ
ಮಹಾ ಯಜ್ಞಗಳನ್ನೂ, ಲಕ್ನೌ ಉದ
ಯಪುರ ಬೊಂಬಾಯಿಗಳ ಲಕ್ಷಚಂಡೀ
ಮಹಾ ಯಜ್ಞಗಳನ್ನೂ ನೋಡುವ
ಸೌಭಾಗ್ಯವು ಯಾರಿಗೆ ಪ್ರಾಪ್ತವಾಗಿ
ದೆಯೋ ಅವರು 'ಈಗ ಕಲಿಯುಗವಲ್ಲ,
ಕೃತಯುಗವೇ' ಎಂದು ಹರ್ಷನಿನಾದ
ಗೈದಿರುವರು. ಎಲ್ಲಿ ಎರಡು ಸಾವಿರ
ವೇದಪಾಠೀ ಬ್ರಾಹ್ಮಣರು ವೇದಧ್ವನಿ
ಮಾಡುತ್ತಿರಬಹುದೋ ನೂರಾರುಮಣ
ಗಟ್ಟಲೆ ಸಾಮಾಗ್ರಿಗಳಿಂದ ಯಜ್ಞಗ
ಳಾಗುತ್ತಿರಬಹುದೋ, ಸ್ವಾಹಾ ಸ್ವಾ
ಹಾದ ಧ್ವನಿಯು ಪ್ರತಿಧ್ವನಿಯನ್ನುಂಟು
ಮಾಡುತ್ತಿರಬಹುದೋ, ಕಥಾ ಕೀರ್ತನ
ಗಳು ನಡೆಯುತ್ತಿರಬಹುದೋ, ದ್ವಾರ
ಕಾದಿ ಪೀಠಗಳ ಜಗದ್ಗುರು ಶಂಕರಾ
ಚಾರ್ಯರುಗಳೂ, ರಾಮಾನುಜಾ
ಚಾರ್ಯ ವಲ್ಲಭಾಚಾರ್ಯಾದಿಗಳೂ ಸಿಂ
ಹಾಸನಗಳ ಮೇಲೆ ವಿರಾಜಿಸುತ್ತಿರ
ಬಹುದೋ, ಭಾರತದ ದೊಡ್ಡದೊಡ್ಡ
ಧುರಂಧರ ಶಾಸ್ತ್ರಾರ್ಥ ಮಹಾ ರಥಿ
ಗಳಾದ ವಿದ್ವಾಂಸರು ವಿಜಯಂಗೈದಿರ
ಬಹುದೋ, ಗಂಗಾ, ಯಮುನಾ,
ಗೋಮತೀನದಿಗಳ ತಟಗಳಿರಬಹುದೋ
ಆಲ್ಲಿ ಕೃತಯುಗವಲ್ಲದಿದ್ದರೆ ಮತ್ತೇ
ನು?— ಈ ಎಲ್ಲಾ ದೃಶ್ಯಗಳು ನೋಡ
ಲಿಕ್ಕೆ ದೊರೆತುದು ಈ ಭಾರತದ ಮಹಾ
ವಿಭೂತಿಗಳಿಬ್ಬರ ದೆಸೆಯಿಂದಲೇ. ಇತರ
ದೇಶಗಳಾದ ಇಂಗ್ಲೆಂಡ್, ಜರ್ಮನಿ
ರಷ್ಯ ಹಾಲೆಂಡ್ ಪೋಲೆಂಡ್ ಫ್ರಾನ್ಸ್
ಜಪಾನ್ ಮುಂತಾದುವುಗಳಲ್ಲಿ ಬಾಂಬು
ವೃಷ್ಟಿಯಿಂದ ಹಾಹಾಕಾರವೆದ್ದು
ಮಹಾ ನಾತವಾಗಿರುವಾಗ ಭಾರತವು
ಕ್ಷತಿಯಿಲ್ಲದೆ ಉಳಿದುಕೊಂಡಿತು. ಒಂ
ದು ವೇಳೆ ಭಾರತವಾಸಿಗಳು ಈಗ
ಲಾದರೂ ಕಣ್ದೆರೆದು ಈ ಮಹಾತ್ಮರು
ತೋರಿಸಿದ ಮಾರ್ಗದಲ್ಲಿ ನಡೆದು

ಅನರ್ಥಕ್ಕೆ ಹೇತುವು

(ಶ್ರೀ ಕರಪಾತ್ರಿ ಸ್ವಾಮಿಗಳು)

ಭಾರತ ವರ್ಷವು ಅತಿ ಪವಿತ್ರವಾದ ದೇಶ, ಅತಿ ಪವಿತ್ರವಾದ ಕ್ಷೇತ್ರವಾಗಿದೆ. ಇಲ್ಲಿ ಜನ್ಮಿಸುವುದಕ್ಕಾಗಿ ದೇವತೆಗಳೂ ಲಾಲಾಯಿತರಾಗಿರುತ್ತಾರೆ! ಅದೇ ದೇಶವು ಬಹಳ ದಿನಗಳಿಂದ ದೀನ ಸ್ಥಿತಿಯಲ್ಲಿದೆ, ದರಿದ್ರಸ್ಥಿತಿಯಲ್ಲಿದೆ. ಅದಕ್ಕೆ ಒಂದೇ ತರದ ಪತನವಲ್ಲ — ಭೌತಿಕ ಪತನ, ಆಧ್ಯಾತ್ಮಿಕ ಪತನ, ನೈತಿಕ ಪತನ—ಎಲ್ಲ ವಿಧದ ಪತನವಾಗುತ್ತಾ ಇದೆ ಎಲ್ಲಿಯ ವಿದ್ವಾಂಸರು ಧರ್ಮದ ಚರ್ಚೆ, ಆತ್ಮದ ಚರ್ಚೆ, ಪರಬ್ರಹ್ಮ ಭಗವಂತನ ಸಾಕ್ಷಾತ್ಕಾರ ಚರ್ಚೆಗಳನ್ನು ಮಾಡುತ್ತಿದ್ದರೂ, ಅಲ್ಲೀಗ ಉಪ್ಪು—ಎಣ್ಣೆ—ಕಟ್ಟಿಗೆಗಳ ಹೊರತು ಬೇರೆ ಮಾತೇ ಹೊರಡುವುದಿಲ್ಲ. ಈಗಿನ ದರಿದ್ರತನ ದೀನತನ ಪರತಂತ್ರತನ ಇವೆಲ್ಲಾ ಯಾಕೆ? ಈ ಯೆಲ್ಲಾ ಅನರ್ಥಗಳಿಗೆ ಮೂರ್ಖತನವು ಕಾರಣವಲ್ಲವೆ? ದೀನತನ ಪರತಂತ್ರತನ ದರಿದ್ರತನ ಅನೇಕ ಪ್ರಕಾರದ ವಿಪತ್ತುಗಳು ಎಷ್ಟೇ ಇರಲಿ, ಆದರೆ ಒಂದುವೇಳೆ ಮೂರ್ಖತನ ಇಲ್ಲದಿದ್ದರೆ ಪ್ರಾಣಿಯು ತನ್ನ ಜೀವನವನ್ನು ಮಂಗಲಮಯವಾಗಿ ಮಾಡಿಕೊಳ್ಳಬಹುದು. ಒಂದುವೇಳೆ ಇವೆಲ್ಲವೂ ಇಲ್ಲದೆ ಒಂದೇಒಂದು ಮೂರ್ಖತನ ವಿದ್ದುಬಿಟ್ಟರೆ ಅದು ಮೆಲ್ಲಮೆಲ್ಲಗೆ ವೈರಾಗ್ಯ, ಸ್ವತಂತ್ರತನ, ಈಶ್ವರತ್ವಗಳನ್ನು ಬೀಳ್ಕೊಟ್ಟು ತನ್ನ ಸಹಚರರಾದ ದರಿದ್ರತನ, ಪರತಂತ್ರತನ ದೀನತನ ಎಲ್ಲವನ್ನೂ ಕರೆದುಕೊಳ್ಳುತ್ತದೆ. ಮೂರ್ಖತನವಿಲ್ಲದಿದ್ದರೆ ದೀನತನವಿರಲಾರದೆಂದು ನಮ್ಮಲ್ಲಿಯ ಶಾಸ್ತ್ರಗಳು ಉಚಿತವಾಗಿಯೇ ನುಡಿದಿವೆ. [ಸಶೇಷ

ಧರ್ಮಶಕ್ಷಣೆಯಲ್ಲಿ ಭಾಗ ವಹಿಸದೆ ಹೋದಲ್ಲಿ, ಅಪರ ಅವಸ್ಥೆಯು ಅನ್ಯ ದೇಶದವರಿಗಾದಂತೆಯೇ ಆಗುವುದೆಂಬುದನ್ನು ನೆನಪಿನಲ್ಲಿಟ್ಟುರಲಿ. ಈ ವೀತರಾಗದ ಮಹಾತ್ಮರು ತಿಳಿಸಿದ ಮಾರ್ಗದ ಮೇಲೆ ನಡೆದು, ಶಾಸ್ತ್ರಾನುಸಾರವಾದ ಜೀವನವನ್ನು ಮಾಡಿಕೊಂಡು, ಮನೆಮನೆಗಳಲ್ಲಿ ಪುರಾಣ ಕೀರ್ತನ ಯಜ್ಞಗಳ ಸಮಾರಂಭಗಳನ್ನು ಆರಂಭಿಸಿದುದಾದರೆ ಭಾರತಮಾತೆಯು ಪಾರತಂತ್ರ್ಯದ ಬೇಡಿಗಳು ಕ್ಷಣಮಾತ್ರದಲ್ಲಿ ಕಡಿದುಹೋಗಿ, ಎಲ್ಲೆಲ್ಲೂ ಸುಖಶಾಂತಿಯು ದೃಷ್ಟಿಗೋಚರವಾಗುವ ದಿನವು ದೂರವಿಲ್ಲ ಈ ಮಹಾತ್ಮರು ಹೇಳುವುದೇನೆಂದರೆ—ಜೀವರೇ! ಯಜ್ಞಭಗವಂತನ ಶರಣುಹೋಗಿರಿ ಮತ್ತು ಯಜ್ಞ ಭಗವಂತನ ಆಶೀರ್ವಾದದಿಂದ ಬೇಕಾದುದನ್ನೆಲ್ಲಾ ಪಡೆದುಕೊಳ್ಳಿರಿ.

ಮೇಷ — ಆರೋಗ್ಯ ಚರ್ಚು ಹೆಚ್ಚು. ವ್ಯವಹಾರದಲ್ಲಿ

ವೃಷಭ — ಕಲಹವಾಗುವ ಸಂಭವವಿದೆ ಆದರೆ ಧರ್ಮದಿಂದಲೆ ದಲ್ಲಿ ನಿಮಗೆ ಯಾವ ತೊಂದರೆಯು ರುವುದಿಲ್ಲ. ಆರೋಗ್ಯವಿರದು. ನಸ್ಸು ಚಂಚಲವಾಗಿರುತ್ತದೆ.

ಮಿಥುನ — ಆರೋಗ್ಯ ಆರ್ಥಿಕ ವ್ಯವಹಾರಿಕ ಸ್ಥಿತಿಗಳು ಅನುಕೂಲವಾಗಿರುತ್ತವೆ.

ಕರ್ಕಾಟಕ — ಧನಲಾಭವುಂಟು. ಕಷ್ಟಗಳು ನಿವಾರಣೆಯಾಗಿ ಸುಖವು ತಲೆದೋರುವುದು.

ಸಿಂಹ — ಉತ್ತಮ ಫಲದಾಯಕವಾದ ವಾರ. ಆರೋಗ್ಯವುಂಟು. ಆರ್ಥಿಕ ಲಾಭವುಂಟು. ವ್ಯವಹಾರದಲ್ಲಿ ಜಯವುಂಟು.

ಕನ್ಯಾ — ಆರೋಗ್ಯವಿರುವುದಿಲ್ಲ. ವ್ಯವಹಾರದಲ್ಲಿ ಚಿಂತೆ. ಧನಹಾನಿ.

ತುಲ — ಆರೋಗ್ಯವುಂಟು ಖರ್ಚು ಹೆಚ್ಚುವುದು ಧನಲಾಭವೂ ಉಂಟು

ವೃಶ್ಚಿಕ — ಶಾರೀರಕ, ಆರ್ಥಿಕ ವ್ಯವಹಾರಿಕ ಸ್ಥಿತಿಗಳು ಉತ್ತಮವಿರುತ್ತವೆ

ಧನಸ್ಸು — ಆರೋಗ್ಯವುಂಟು ಧನಲಾಭವುಂಟು ಮನಸ್ಸಿಗೆ ಶಾಂತಿಯುಂಟು ವ್ಯವಹಾರದಲ್ಲಿ ಪ್ರಗತಿ.

ಮಕರ — ವ್ಯವಹಾರಂಗಳು ನಿಮಿಗೆ ಅನುಕೂಲವಾಗಿ ನಡೆಯುತ್ತವೆ ಚಿಂತಾ ನಾಶ ಧನಲಾಭ

ಕುಂಭ — ಪರಿಸ್ಥಿತಿಗಳು ಈವಾರ ಉತ್ತಮವಿರಲಾರವು ಆರೋಗ್ಯವೂ ಇರಲಾರದು ವ್ಯವಹಾರದಲ್ಲಿ ಕಷ್ಟಗಳು ತೋರಿಬರುತ್ತಿರುತ್ತವೆ ಆದರೆ ಧರ್ಮ ಮಾರ್ಗದಿಂದ ಹಿಮ್ಮೆಟ್ಟದಿದ್ದಲ್ಲಿ ಸುಖವುಂಟು

ಮೀನ — ವಿರುದ್ಧ ಭಾವವುಳ್ಳವರಿಂದ ದೂರರಾಗಿದ್ದಲ್ಲಿ ಉತ್ತಮ ಮನೋವೈಕಲ್ಯತೆ ಇರುತ್ತದೆ ಹೆಣಂಬೇಡಿ ಮನೆಯಲ್ಲಿ ಕೋಪತಾಪಗಳಿಗೆ ಎಡೆಕೊಡಬೇಡಿ

Save the Co

ಗೋ ವಧೆ ನಿಲ್ಲಲಿ

Edited, Printed and Pu
by M S Krishna Rao
Satyavadi Press,
Agrahar, 'Mysore